O.S. No.130/2016 P.W. 1 Dated :20-09-2023.

ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.

ಪಾಟೀಸವಾಲು -ಶ್ರೀ. ಎಂ.ಎಸ್ . ವಕೀಲರಿಂದ.

ಸ.ನಂ.69 ರ 6 ಎಕರೆ 22 ಗುಂಟೆ ಸ್ವತ್ತಿಗೆ ಸಂಬಂಧಿಸಿದಂತೆ ದಾವೆ ಹೂಡಿರುತ್ತೇನೆ. ದಾವಾ ಸ್ವತ್ತು ನನ್ನ ತಂದೆಯಿಂದ ನನಗೆ ಬಂದಿರುತ್ತದೆ. ವಾದಪತ್ರಕ್ಕೆ ನಾನೇ ಮಾಹಿತಿ ನೀಡಿರುತ್ತೇನೆ . ವಾದಪತ್ರದಲ್ಲಿ ತಿಳಿಸಿಸಿರುವಂತೆ ತಹಸೀಲ್ದಾರರಿಗೆ ನೀಡಿರುವ ನೋಟೀಸನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ದಾವಾ ಸ್ವತ್ತಿನ ಪಶ್ಚಿಮ ದಿಕ್ಕಿನಲ್ಲಿ ಕೆಂಚಯ್ಯನವರ ಸ್ವತ್ತು ಇದ್ದು ಅದಾದ ನಂತರ ಸ.ನಂ. 71 ರ ಸ್ವತ್ತು ಇದೆ. ಸ.ನಂ. 71/2 ರ ಪಹಣಿ 1 ನೇ ಪ್ರತಿವಾದಿಯ ಗಂಡನ ಹೆಸರಿನಲ್ಲಿದೆ. ಸ.ನಂ. 71/2 ರ ಜಮೀನನ್ನು ಒಳಗೊಂಡಂತೆ ನಾನು ಚಕ್ಕುಬಂದಿಯನ್ನು ನಮೂದಿಸಿ ದಾವಾ ಹೂಡಿರುತ್ತೇನೆ ಎಂದರೆ ಸರಿಯಲ್ಲ. ಸ.ನಂ. 69 ಮತ್ತು 71 ಒಂದೇ ಬೌಂಡರಿ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಬೇಲಿಯನ್ನು ಪ್ರತಿವಾದಿಯರು ತೆರವುಗೊಳಿಸಿ ನಮ್ಮ ಸ್ವಾಧೀನದಲ್ಲಿರುವ ದಾವಾ ಸ್ವತ್ತನ್ನು ಉಳುಮೆ ಮಾಡಿಸಿದ್ದರು. ಸ.ನಂ.69 ರ ಸ್ವತ್ತಿನಲ್ಲಿ ನಾವು ಎಂದಿಗೂ ಸಹ ಸ್ವಾಧೀನಾನುಭವದಲ್ಲಿರುವುದಿಲ್ಲ ಎಂದರೆ ಸರಿಯಲ್ಲ. ನ್ಯಾಯಾಲಯದ ಆದೇಶ ಪಡೆದುಕೊಂಡು ಪ್ರತಿವಾದಿಗಳ ಸ್ವತ್ತನ್ನು ಲಪಟಾಯಿಸುವ ಉದ್ದೇಶದಿಂದ ಸುಳ್ಳು ದಾವೆ ಹೂಡಿರುತ್ತೇನೆ ಎಂದರೆ ಸರಿಯಲ್ಲ.

ಮುಂದುವರಿದ ಪಾಟೀಸವಾಲಿಗಾಗಿ ಕಾಲಾವಕಾಶ ಕೋರಿದ್ದು , ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಆಲೂರು.